


## ಸ್ವಾಗತ, 'ಬಿಗ್ ಬಾಸ್'ಗೆ ಸ್ವಾಗತ

ಕಲರ್ಸ್ ಕನ್ನಡ ವಾಹಿನಿಯ 'ಬಿಗ್ ಬಾಸ್' ಕಾರ್ಯಕ್ರಮವನ್ನು ಬಹುಕಾತರದಿಂದ ನಿರೀಕ್ಷಿಸುತ್ತಿರುವ ವೀಕ್ಷಕರಲ್ಲಿ ನಾನೂ ಒಬ್ಬಳು. ಅದು ಕಿರುತೆರೆಗೆ ಬರಬೇಕೆಂದರೆ ಮೂರು ಧಾರಾವಾಹಿಗಳಾದರೂ ತಮ್ಮ ಸ್ಥಾನವನ್ನು ತೆರವು ಮಾಡುತ್ತವೆ. ಕುತೂಹಲದ ಕಥೆಯೇ ಇಲ್ಲದೆ ಮುಂದುವರೆಸಲು ಹೋರಾಟ ನಡೆಸುತ್ತಿರುವ ಧಾರಾವಾಹಿಗಳು ಕೊನೆಗೊಳ್ಳುವುದು ಒಳ್ಳೆಯದು.

—ಶ್ರುತಿ ಎಸ್., ಬೆಂಗಳೂರು

## ಕನ್ನಡದ ನಡುವೆ ಇಂಗ್ಲಿಷ್ ಕಡಲೆ ಯಾಕೆ?

ಝೀ ಕನ್ನಡದ 'ಭರ್ಜರಿ ಬ್ಯಾಚುಲರ್ಸ್' ಚೆನ್ನಾಗಿದೆ. ಅಕುಲ್ ಬಾಲಾಜಿ ಅವರ ನಿರೂಪಣೆ ಅದ್ಭುತ. ಹೊಸದಾಗಿ ಪರಿಚಯವಾದ ಜೋಡಿಗಳು, ಒಬ್ಬರ ಊರಿಗೆ ಮತ್ತೊಬ್ಬರು ಹೋಗಿ ಅವರ ಮನೆಯ ವಾತಾವರಣ, ಸ್ಥಳದ ವಿಶೇಷ, ವೇಷಭೂಷಣ, ಆಚಾರ ವಿಚಾರವನ್ನು ಅರಿತು ವೇದಿಕೆಯಲ್ಲಿ ಹಂಚಿಕೊಳ್ಳುವ ಸನ್ನಿವೇಶ ಚೆನ್ನಾಗಿ ಮೂಡಿಬರುತ್ತಿದೆ.

ತೀರ್ಪುಗಾರರಾದ ರವಿಚಂದ್ರನ್, ಕಲಾವಿದರನ್ನು ಪ್ರೋತ್ಸಾಹಿಸುತ್ತಾರೆ. ರಚಿತಾ ರಾಮ್ ನಿರ್ವಹಣೆಯೂ ಚೆನ್ನಾಗಿದೆ. ಹೆಚ್ಚು ಇಂಗ್ಲಿಷ್ ಪದಗಳನ್ನು ಬಳಸಿ ಕನ್ನಡ ಮಾತನಾಡುತ್ತಾರೆ. ಸ್ವಲ್ಪ ಬದಲಾವಣೆ ಅಗತ್ಯ.

—ಬಿ. ಗಂಗಾಧರ್, ಬೆಂಗಳೂರು

## ಗಾಂಧೀಜಿ ಮರೆತರೆ ಹ್ಯಾಂಗ...

ಕಳೆದ ವಾರ ಗಾಂಧಿ ಜಯಂತಿ ನೆಪದಲ್ಲಿ ಮಹಾತ್ಮನನ್ನು ರಾಷ್ಟ್ರದ ಎಲ್ಲೆಡೆ ಸ್ಮರಿಸಿದ್ದೇವೆ. ದುರಂತ ಎಂದರೆ, ಕನ್ನಡದ ವಾಹಿನಿಗಳಿಗೆ ರಾಷ್ಟ್ರಪಿತನ ನೆನಪೇ ಬರಲಿಲ್ಲ. ಧಾರಾವಾಹಿಗಳಲ್ಲಿ ಕಥೆಗೆ ಪೂರಕ ಇಲ್ಲದೇ ಇದ್ದರೂ ಹಬ್ಬಗಳ ದೃಶ್ಯ ತುರುಕಿ ವೈಭವ ಮೆರೆಯುತ್ತಾರೆ. ಇನ್ನು ಕನ್ನಡ ಸಿನಿಮಾ ವಾಹಿನಿಗಳಿಗೆ ಅಪ್ಪಿ ತಪ್ಪಿಯೂ ಗಾಂಧಿ ಜಯಂತಿಯ ನೆನಪು ಬರಲಿಲ್ಲ! ಗಾಂಧಿ ಜೊತೆ ಲಾಲ್ ಬಹಾದ್ದೂರ್ ಶಾಸ್ತ್ರಿ ಅವರನ್ನೂ ಮರೆತದ್ದು ನಮ್ಮ ಕನ್ನಡ ವಾಹಿನಿಗಳ ಅಕ್ಷಮ್ಯ.

—ಆರ್. ವೀರೇಶ್ ಕುಮಾರ್, ಬೆಂಗಳೂರು

**ವಾರದ ಪತ್ರ**

## ಕ್ರೀಡಾ ಸಾಧಕರು ವಾಹಿನಿಗಳಿಗೆ ಅಪಥ್ಯ!

ಸುದ್ದಿ ಮಾಧ್ಯಮಗಳು ಕೊಲೆ–ಹಿಂಸೆಯಂತಹ ಘಟನೆಗಳನ್ನು ದಿನವಿಡೀ ಪ್ರಸಾರ ಮಾಡುತ್ತವೆ. ಸಾಲದ್ದಕ್ಕೆ ಪ್ರೈಮ್ ಸಮಯದಲ್ಲೂ ಅದೇ ಸುದ್ದಿ. ಜೊತೆಗೆ ಪ್ರತ್ಯಕ್ಷ ವರದಿಗಾರನ ವಿಶ್ಲೇಷಣೆ, ಅದಕ್ಕೊಂದಿಷ್ಟು ನ್ಯೂಸ್ ರೂಮಿನಿಂದ ಮಸಾಲೆ. ಇವರೇ ನ್ಯಾಯ ಅನ್ಯಾಯದ ವಿಚಾರಣೆಯನ್ನೂ ಮಾಡಿ ತೀರ್ಪು ನೀಡುತ್ತಾರೆ. ಈ ಬಗ್ಗೆ ಹಲವು ಬಾರಿ ಆಕ್ಷೇಪ ವ್ಯಕ್ತವಾದರೂ ತಿದ್ದಿಕೊಂಡಿಲ್ಲ. ಏಷ್ಯನ್ ಕ್ರೀಡಾಕೂಟದಲ್ಲಿ ನಮ್ಮ ಕ್ರೀಡಾಪಟುಗಳ ಸಾಧನೆಯನ್ನು ಗುರುತಿಸಿಲ್ಲ. ಆ ಬಗ್ಗೆ ತಿರುಗಿಯೂ ನೋಡಿಲ್ಲ ಎನ್ನುವುದೇ ಈ ಮಾಧ್ಯಮಗಳ ಕ್ರೀಡಾ ಮನೋಭಾವ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## 'ನಾನು' ಬಿಟ್ಟರೆ ಮೋಹನ ಮುರಳಿ!

ಕಲರ್ಸ್ ಕನ್ನಡದ 'ಸವಿರುಚಿ'ಯಲ್ಲಿ ಸೆಲೆಬ್ರಿಟಿಗಳು, ಗೃಹಿಣಿಯರು ಅಡುಗೆಯನ್ನು ಹೇಳಿಕೊಡುತ್ತಾರೆ. ಈ ಕಾರ್ಯಕ್ರಮ ಚೆನ್ನಾಗಿರುತ್ತದೆ. ಅನೇಕ ಸಂದರ್ಭದಲ್ಲಿ ನಿರೂಪಕ ಮುರುಳಿ ಅಮ್ಮ ಅನಗತ್ಯ ಮಾತನಾಡುತ್ತಿದ್ದಾರೆ ಎಂದೆನಿಸುತ್ತದೆ. ಆಹ್ವಾನಿತರಿಗೆ ಮಾತನಾಡಲು ಬಿಡುವುದೇ ಇಲ್ಲ. ಕೆಲವೊಮ್ಮೆ ಅವರನ್ನು ಹಗುರವಾಗಿ ಮಾತನಾಡಿಸುತ್ತಾರೆ. ಅವರ ಜೊತೆ ಗೌರವವಾಗಿ ನಡೆದುಕೊಳ್ಳುವುದಿಲ್ಲ. ಪ್ರತೀ ಮಾತಿನ ಮಧ್ಯ 'ನಾನು ಮುರಳಿ' ಎಂದು ಅನಗತ್ಯವಾಗಿ ಸೇರಿಸುತ್ತಾರೆ. ಅವರ ಮಾತು ಕೇಳಲು ಬೇಸರ ತರಿಸುತ್ತದೆ.

—ಎಂ.ಎಸ್. ಉಷಾ ಪ್ರಕಾಶ್, ಮೈಸೂರು

## ಒಡೆಯುವುದು ಜೇನಲ್ಲ!

ಸ್ಟಾರ್ ಸುವರ್ಣದ 'ಜೇನುಗೂಡು'ದಲ್ಲಿ ಒಬ್ಬ ತಾಯಿಯಾಗಿ ಶುಭಾಂಗಿ ತನ್ನ ಮಗಳು ದಿಯಾಳಿಗೆ ಗಂಡನನ್ನು ಬಿಟ್ಟು ಬಂದರೆ ಸಂಕಷ್ಟಗಳನ್ನೆಲ್ಲಾ ಪರಿಹರಿಸುತ್ತೇನೆ ಎನ್ನುತ್ತಾಳೆ. ನಮ್ಮ ಸಂಸ್ಕೃತಿಯಲ್ಲಿ ಎಲ್ಲರ ಜೊತೆ ಹೊಂದಾವಣಿಕೆಯಿಂದ ಬಾಳಮ್ಮ ಎಂದು ಹೇಳುವುದನ್ನು ಕಂಡಿದ್ದೇವೆ. ಹೀಗಿರುವಾಗ ಜೇನುಗೂಡು ಎನ್ನುವುದಕ್ಕೆ ಅರ್ಥ ಇದೆಯಾ?

—ಶ್ಯಾಮಲಾ ಸತ್ಯ, ಬೆಂಗಳೂರು

## 'ಅನುಬಂಧ' ಬಲು ಸೊಗಸು

ಕಲರ್ಸ್ ಕನ್ನಡದ 'ಅನುಬಂಧ ಅವಾರ್ಡ್ಸ್' ಶ್ಲಾಘನೀಯ ಕಾರ್ಯಕ್ರಮ. ಧಾರಾವಾಹಿಯ ನಟ–ನಟಿಯರ ಪರಿಶ್ರಮಕ್ಕೆ ಮೆಚ್ಚುಗೆಯ ರೂಪದಂತೆ ಅವಾರ್ಡ್ಸ್ ನೀಡುವುದು ತುಂಬಾ ಸಂತೋಷದ ವಿಚಾರ.

—ಎಂ.ಟಿ. ರಮಾನಂದ ರೆಡ್ಡಿ, ಮದಕರಿಪುರ

ಕಿರುತೆರೆ ಜಗತ್ತು ಸಾಕಷ್ಟು ವಿಸ್ತಾರವಾಗಿದೆ. ಕಲರ್ಸ್ ಕನ್ನಡ ದಶಕದ ಹಿಂದೆ 'ಅನುಬಂಧ ಅವಾರ್ಡ್ಸ್' ಆರಂಭಿಸಿತು. ಇದರಲ್ಲಿ ಉತ್ತಮ ಧಾರಾವಾಹಿಗಳು, ವಾರಾಂತ್ಯದಲ್ಲಿ ವಿಭಿನ್ನ ರಿಯಾಲಿಟಿ ಶೋಗಳೂ ಬರುತ್ತಿವೆ. ವೀಕ್ಷಕರ ಅಭಿಪ್ರಾಯ ಸಂಗ್ರಹಿಸಿ ವಿವಿಧ ವಿಭಾಗಗಳಲ್ಲಿ ಪ್ರಶಸ್ತಿ ನೀಡುವ ಕಾರ್ಯ ಮೆಚ್ಚಬೇಕು.

—ವೀಣಾ ಶಂಕರ್, ಬೆಂಗಳೂರು

## ನಿರಾಶೆ ಮಾಡದ 'ಮತ್ತೆ ಮಾಯಮೃಗ'

ಸಿರಿ ಕನ್ನಡದ 'ಮತ್ತೆ ಮಾಯಾಮೃಗ' ಧಾರಾವಾಹಿ ಇನ್ನೂ ಇದೆ ಅನ್ನುವಾಗಲೇ ಮುಗಿಸಿದ್ದಾರೆ. ಎಲ್ಲ ಪಾತ್ರಗಳೂ ಚೆನ್ನಾಗಿ ಮೂಡಿಬಂದಿವೆ. ಪ್ರತಿಯೊಂದು ಪಾತ್ರವೂ ಪೂರ್ಣತೆಯಿಂದ ಮುಕ್ತಾಯವಾಯ್ತು ಎಂದೆನಿಸಿತು. ಅನ್ಯಾಯ ಮಾಡಿದ ರಾಜೀವ್, ಸರಳಾ, ಸಚಿನ್‌ಗೆ ಜೈಲು ಶಿಕ್ಷೆಯಾಯಿತು, ಅಭಿನಂದನ್, ಸರಸ್ವತಿ ಆಸ್ತಿ ಮೇಲೆ ಕಣ್ಣಿಟ್ಟು ಮದುವೆ ಆಗಬೇಕಿದ್ದ ಮಹತಿಯನ್ನು ತಿರಸ್ಕರಿಸಿದ. ಸರಸ್ವತಿಯನ್ನು ಆಸೆ ಪಟ್ಟು ಅದೂ ಕೈಗೂಡಲಿಲ್ಲ. ಯಥಾಪ್ರಕಾರ ಸಿ.ಎಸ್.ಪಿ. ಅವರ ಕೋರ್ಟ್ ಸನ್ನಿವೇಶಕ್ಕೆ ವೀಕ್ಷಕರು ಕಾಯುತ್ತಿರುವಾಗಲೇ ಮುಗಿಸಿದ್ದು ಸಣ್ಣ ನಿರಾಶೆಯನ್ನು ಹುಟ್ಟಿಸಿದೆ. ಆದರೂ ಒಂದು ಒಳ್ಳೆಯ ಧಾರಾವಾಹಿಯನ್ನು ನೀಡಿದ್ದಾರೆ. ಸಕಾಲಕ್ಕೆ ಅದನ್ನು ಪೂರ್ಣಗೊಳಿಸಿದ್ದಾರೆ.

—ಭಾರತೀ ಗಂಗಾಧರ್, ಬೆಂಗಳೂರು

ಯಾವುದೇ ಆಸ್ತಿಯನ್ನು ಕೊಳ್ಳುವುದು, ಮಾರುವುದು. ಪುನಃ ಕೊಳ್ಳುವುದು ಎಲ್ಲವೂ ಹೂವೆತ್ತಿದಷ್ಟು ಸುಲಭ ಹಾಗೂ ಇನ್ನೇನು ಕೊಲೆ ಮಾಡಬೇಕೆನ್ನುವಷ್ಟರಲ್ಲಿ ಊರಿಗೊಬ್ಬೇ ಪದ್ಮಾವತಿಯಂತಿರುವ ಸಬ್‌ಇನ್ಸ್‌ಪೆಕ್ಟರ್ ಬಂದು ಅರೆಸ್ಟ್ ಮಾಡೋದು... ಆಹಾ, ಮಾಯಾಮೃಗವೇ...

—ಕೆ. ಲಲಿತಾ ಮೂರ್ತಿ, ಬೆಂಗಳೂರು